# ಶ್ರೀಮಾತೆಯವರ ಪತ್ರಗಳು - ೧೩

ಅನುವಾದ: **ಪ್ರವ್ರಾಜಿಕಾ ಧರ್ಮಪ್ರಾಣಾ**



### ಪತ್ರ - ೬೯

ಶ್ರೀ ಶ್ರೀ ದುರ್ಗೆಯ ಕೃಪೆ

೧೪.೮.೧೯೧೧

೨೯, ಶ್ರಾವಣ

ಚಿರಂಜೀವಿಗೆ,

ಮಗೂ, ಈಗ ತಾನೇ ನೀನು ಕಳುಹಿಸಿರುವ ೧೦ ರೂಪಾಯಿ ಮನಿಯಾರ್ಡರ್ ಸಿಕ್ಕಿತು. ಆ ಹಣದಿಂದ ನಿನ್ನ ಬಾಲಕ ಬಾಲಕಿಯರಿಗಾಗಿ ಮತ್ತು ನಿಮಗಾಗಿ ಮಂಗಳವನ್ನು ಆಶಿಸುತ್ತಾ ಶ್ರೀ ಠಾಕೂರರಿಗೆ ಪೂಜೆಯನ್ನು ಮಾಡಿಸಿ, ನಿತ್ಯ ಪ್ರಾರ್ಥನೆಯನ್ನು ಮಾಡುತ್ತಿದ್ದೇನೆ. ಅವರು ನಿಮಗೆಲ್ಲಾ ಮಂಗಳವನ್ನು ಉಂಟು ಮಾಡಲಿ. ಉಳಿದಂತೆ ಇಲ್ಲಿ ಎಲ್ಲವೂ ಕ್ಷೇಮ. ನಿಮ್ಮೆಲ್ಲರ ಕ್ಷೇಮವನ್ನು ತಿಳಿಸಿ ಸಮಾಧಾನ ಕೊಡು. ಇತಿ,

ನಿಮ್ಮೆಲ್ಲರ ತಾಯಿ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***

*ಶ್ರೀಲಯ (ಶ್ರೀಲ) ಶ್ರೀಯುತ ಬಾಬು ತಾರಕನಾಥ್ ರಾಯ್ ಚೌಧುರಿ*

ಮಗು, ಸುರಕ್ಷಿತವಾಗಿರು

*kathiadi*

*ಮೊ: ಕಠಿಯಾದಿ ಸಬ್ ರಿಜಿಸ್ಟರರ ಆಫೀಸ್*

*ಪೋ: ಕಠಿಯಾದಿ, ಜಿಲ್ಲೆ- ಮೈಮನ್‌ಸಿಂಗ್*

### ಪತ್ರ - ೭೦

ಶ್ರೀ ಶ್ರೀ ದುರ್ಗೆಯ ಕೃಪೆ

೨೪.೮.೧೯೧೧

೬, ಭಾದ್ರಪದ

ಚಿರಂಜೀವಿಯಾಗು.

ಮಗೂ, ನಿನ್ನ ಪತ್ರ ತಲುಪಿ ಸಂತೋಷವಾಯಿತು. ಒಂದು ವೇಳೆ ಆಮೇಲೆ ಇಲ್ಲಿಗೆ - ಎಂದರೆ ಜಯರಾಂಬಾಟಿ ಗ್ರಾಮಕ್ಕೆ ಬಂದರೆ, ಬರುವಾಗ ಶರತ್ ಮಹಾರಾಜರನ್ನು ಭೇಟಿ ಮಾಡಿ ಹಾಗೂ ಮಗನು ಶಶಿ ಹೇಗಿದ್ದಾನೆಂದು ವಿಚಾರಿಸಿ ಬನ್ನಿ. ಏಕೆಂದರೆ ಶಶಿಗೆ ಜ್ವರ ಬಂದಿದೆ.

ಇಲ್ಲಿ ಕ್ಷೇಮ. ನಿಮ್ಮೆಲ್ಲರ ಕ್ಷೇಮಕ್ಕೆ ಬರೆ.

ಇತಿ ನಿಮ್ಮೆಲ್ಲರ ತಾಯಿ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ :***

*ಶ್ರೀಯುತ ನಿಶಿಕುಮಾರ್ ಗಂಗೋಪಾಧ್ಯಾಯ*

ಮಗೂ, ಸುರಕ್ಷಿತವಾಗಿರು.

*ಕೊಲ್ಕತ್ತಾ ೮೪ ನಂ (ಸೀತಾರಾಮ್) ಘೋಷ್ ರ ಮನೆ Cal*

### ಪತ್ರ -೭೧

ಶ್ರೀ ಶ್ರೀ ಗುರವೇ ನಮ

೧೫.೯.೧೯೧೧

ಸುರಕ್ಷಿತವಾಗಿರು,

ಪರಮ ಶುಭಾಶೀರ್ವಾದ. ವಿಶೇಷವೇನೆಂದರೆ,

ನಿನ್ನ ಒಂದು ಪತ್ರ ಹಾಗೂ ಪಾರ್ಸೆಲ್‌ನಲ್ಲಿರುವ ಎಲ್ಲಾ ವಸ್ತುಗಳೂ ಸಿಕ್ಕಿವೆ ಅನ್ನಿಸುತ್ತದೆ. ನೀನು ಸುರಕ್ಷಿತವಾಗಿ ತಲುಪಿ ರುವೆ ಎಂದು ಕೇಳಿ ಸಂತೋಷವಾಯಿತು. ನಿಮಗೆಲ್ಲರಿಗೂ ನನ್ನ ಆಶೀರ್ವಾದಗಳು. ನಾವೆಲ್ಲರೂ ಚೆನ್ನಾಗಿದ್ದೇವೆ. ಇತಿ,

೧೩೧೮/೨೮ ಭಾದ್ರ

ನಿಮ್ಮೆಲ್ಲರ ತಾಯಿ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***

*ಪರಮ ಶುಭ*

*ಶ್ರೀಯುತ ನಿಶಿ ಕುಮಾರ್ ಗಂಗೋಪಾಧ್ಯಾಯ*

*ಪ್ರೀತಿಯ ಮಗ*

*೮೪ ನಂ ಸೀತಾರಾಂ ಘೋಷ್ ಸ್ಟ್ರೀಟ್, ಕೊಲ್ಕತ್ತಾ*

### ಪತ್ರ - ೭೨

ಶ್ರೀ ಶ್ರೀ ರಾಮಕೃಷ್ಣ ಶ್ರೀ ಚರಣದಲ್ಲಿ ಭರವಸೆ

೧೫.೧೦.೧೯೧೧

ಜಯರಾಂಬಾಟಿ
೧೩೧೮, ಆಶ್ವಯುಜ ೨೭

ಪ್ರೀತಿಯ ಮಗೂ,

ನಿನ್ನ ಪತ್ರ ಸಿಕ್ಕಿ ಸಮಾಧಾನ ಪಟ್ಟೆ. ನಾನು ಚೆನ್ನಾಗಿದ್ದೇನೆ. ಇಲ್ಲಿ ಎಲ್ಲವೂ ಕ್ಷೇಮವೆಂದು ತಿಳಿ. ನಿನಗೆ ನನ್ನ ಆಶೀರ್ವಾದ. ನಿರ್ಮಲ, ಆಶು, ಸೀತಾರಮಣ, ಮಿಸೆಸ್ ಸೇವಿಯರ್ ಮತ್ತು ಕ್ರಿಸ್ಟೀನ್ ಎಲ್ಲರಿಗೂ ನನ್ನ ಆಶೀರ್ವಾದಗಳನ್ನು ತಿಳಿಸು. ಅಚಲ ಪ್ರೇಮ ಭಕ್ತಿ ನಿನಗೆ ಉಂಟಾಗಲಿ ಎಂದು ಗುರುದೇವರಲ್ಲಿ ಪ್ರಾರ್ಥನೆ.

ಇತಿ, ಶ್ರೀಮಾತೆ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***

*Swami Virajananada*
*The Advaita Ashrama*
*Mayavati*
*Lohaghat P.O, Dt. Almora, U.P*

**ವಿವರಣೆ :** ಮಿಸೆಸ್ ಸೇವಿಯರ್ ಹಾಗೂ ಅವರ ಪತಿ ಕ್ಯಾಪ್ಟನ್ ಸೇವಿಯರ್ ಮಾಯಾವತಿ ಅದ್ವೈತ ಆಶ್ರಮದ ಸಂಸ್ಥಾಪಕರು. ಸ್ವಾಮೀಜಿಯ ಆದರ್ಶದಿಂದ ಸ್ಫೂರ್ತಿ ಹೊಂದಿ ಈ ದಂಪತಿಗಳು ಭಾರತಕ್ಕೆ ಬಂದು, ಹಿಮಾಲಯದ ತಪ್ಪಲಿನಲ್ಲಿ ಅದ್ವೈತ ಆಶ್ರಮವನ್ನು ನಿರ್ಮಿಸಿದರು. ಕ್ರಿಸ್ಟೀನ್ ಸ್ವಾಮಿ ವಿವೇಕಾನಂದರ ವಿದೇಶೀ ಶಿಷ್ಯೆ.

## ಪತ್ರ – ೭೩

ಓಂ ರಾಮಕೃಷ್ಣ ಜಯತಿ

೩೦.೧೦.೧೯೧೧
ಪೋ : ಆನೂರ್, ಜಯರಾಂಬಾಟಿ
೧೩೧೮, ೮ನೇ ಕಾರ್ತಿಕ

ಪ್ರೀತಿಯ ಮಗೂ,

ನಿನ್ನ ಪತ್ರ ಸಿಕ್ಕಿ ಎಲ್ಲಾ ವಿಷಯಗಳನ್ನು ತಿಳಿದುಕೊಂಡೆ. ನಾನು ಮುಂದಿನ ಆಗ್ರಹಾಯಣ ಮಾಸದಲ್ಲಿ ಕೊಲ್ಕತ್ತಕ್ಕೆ ಹೋಗುವೆನು. ಆ ಸಮಯದಲ್ಲಿ ಕೊಲ್ಕತ್ತದಲ್ಲಿ ದೀಕ್ಷೆಯನ್ನು ಪಡೆದುಕೊಳ್ಳಲು ಅನುಕೂಲವಾಗುವುದು. ಜಯರಾಂಬಾಟಿಯು ರೈಲ್ವೆ ಹಳಿಯಿಂದ ತುಂಬಾ ದೂರದಲ್ಲಿದೆ. ಮಗೂ, ಕೊಲ್ಕತ್ತದಲ್ಲಿ ನಿಮ್ಮೆಲ್ಲರ ದೀಕ್ಷೆ ಬಗ್ಗೆ ಇಲ್ಲಿಂದಲೇ ಚಿಂತಿಸುತ್ತಿದ್ದೇನೆ. ಆ ಸಮಯವನ್ನು ಸ್ವಲ್ಪ ವಿಚಾರಿಸಿ ತಿಳಿದು, ಬಾಗ್‌ಬಜಾರಿಗೆ ಬಂದು ತಲುಪು. ನಾನು ಚೆನ್ನಾಗಿದ್ದೇನೆ. ನಿಮ್ಮೆಲ್ಲರ ಯೋಗಕ್ಷೇಮವನ್ನು ತಿಳಿಸಿ ಸಮಾಧಾನವನ್ನು ಕೊಡು. ನಿನಗೆ ನನ್ನ ಆಶೀರ್ವಾದ.

ನಿನ್ನ ತಾಯಿ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***

*ಶ್ರೀಯುತ ಬಾಬು ತಾರಕನಾಥ್ ಶರ್ಮ ರಾಯ್ ಚೌಧುರಿ*
ಮಗೂ, ಸುರಕ್ಷಿತವಾಗಿರು.
*ಕಠಿಯಾದಿ ಸಬ್ ರಿಜಿಸ್ಟ್ರೀ ಆಫೀಸ್*
*ಪೋ – ಕಠಿಯಾದಿ. ಜಿಲ್ಲೆ– ಮೈಮನ್‌ಸಿಂಗ್*

## ಪತ್ರ –೭೪

ಶ್ರೀ ಶ್ರೀ ಗುರವೇ ನಮಃ

೨೪.೧೦.೧೯೧೧
ಜಯರಾಂಬಾಟಿ , ೧೩೧೮, ಕಾರ್ತಿಕ ೬

ಸುರಕ್ಷಿತವಾಗಿರು.

ಪರಮ ಶುಭಾಶೀರ್ವಾದ. ವಿಶೇಷವೇನೆಂದರೆ,

ನಿನ್ನ ಈ ಒಂದು ಪತ್ರ ತಲುಪಿ ಎಲ್ಲವನ್ನೂ ತಿಳಿದುಕೊಂಡೆ. ನೀನು ಹೇಗಿರುವೆ ಎಂದು ತಿಳಿಸಿ ಈಗಲೇ ಬರೆ. ಕಾಯಿಲೆ ವಾಸಿಯಾಗಿದೆಯೇ ಎಂದು ತಿಳಿಸು — ಠಾಕೂರರು ನಿನಗೆ ಮಂಗಳವನ್ನುಂಟು ಮಾಡಲಿ. ಠಾಕೂರರ ಇಚ್ಛೆಯಿಂದ ಎಲ್ಲವೂ ಪೂರ್ಣವಾಗುವುದು. ನಾವೆಲ್ಲರೂ ಚೆನ್ನಾಗಿದ್ದೇವೆ. ನಿನಗೆ ನನ್ನ ಆಶೀರ್ವಾದ. ನಿಮ್ಮೆಲ್ಲರ ಕ್ಷೇಮವನ್ನು ತಿಳಿಸಿ ಬರೆ. ಇತಿ,

ಢಾಕಾದಲ್ಲಿರುವ ಎಲ್ಲರಿಗೂ ಆಶೀರ್ವಾದಗಳನ್ನು ತಿಳಿಸು.

— ನಿಮ್ಮೆಲ್ಲರ ತಾಯಿಯ ಆಶೀರ್ವಾದ ಪತ್ರ.

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***

*ಪರಮ ಶುಭದ*
*ಶ್ರೀಯುತ ನಿಶಿಕುಮಾರ್ ಗಂಗೋಪಾಧ್ಯಾಯ*
ಮಗೂ, ಸುರಕ್ಷಿತವಾಗಿರು.
*ಜಿಲ್ಲೆ: ತ್ರಿಪುರಾ; ಪೋ: ಇಬ್ರಾಹಿಂಪುರ್*
*ಗ್ರಾಮ –ಇಬ್ರಾಹಿಂಪುರ್ Ibrahimpur*

## ಪತ್ರ – ೭೫

೬.೫.೧೯೧೨
೨೩ನೇ ವೈಶಾಖ , ಕೊಲ್ಕತ್ತಾ

ಶುಭವಾಗಲಿ.

ನಿನ್ನ ಪತ್ರ ಹಾಗೂ ಕಳುಹಿಸಿರುವ ೧೦ ರೂಪಾಯಿ ತಲುಪಿ ಸಂತೋಷವಾಯಿತು. ನಿನಗೆ ಬರಲು ಯಾವಾಗ ಅತ್ಯಂತ ಇಚ್ಛೆಯಾಗುವುದೋ, ಆವಾಗ ಅನುಕೂಲದಂತೆ ಬಾ. ಇಲ್ಲಿ ಎಲ್ಲರೂ ಕ್ಷೇಮ. ನಿಮ್ಮೆಲ್ಲರ ಕ್ಷೇಮಕ್ಕೆ ಮಧ್ಯೆ ಮಧ್ಯೆ ಬರೆ. ಮತ್ತು ನಿನಗೆ ನನ್ನ ಆಶೀರ್ವಾದ.

ಇತಿ ಆಶೀರ್ವಾದ ನೀಡುವ
ನಿನ್ನ ಮಾತೆ

ಪುನಃ – ಈ ಮನೆಯಲ್ಲಿ ಸ್ಥಳ ಕಡಿಮೆಯಾಗಿರುವುದರಿಂದ ಬರುವ ಮೊದಲೇ ಎಲ್ಲಾದರೂ ತಂಗಲು ವ್ಯವಸ್ಥೆ ಮಾಡಿ, ಅನಂತರ ನೀನು ಬರಬೇಕು.

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***

*Sriman Taraknath Chowdhury*
*Sub Registrar's Office, Kathiadi*
*(Mymensing )*